**ಅ.ದಾ.ನಂಃ 45/2023** **ಪಿ.ಡಬ್ಲ್ಯೂ–1**

ದಿನಾಂಕಃ 12.06.2025 ರಂದು ಪಿ.ಡಬ್ಲ್ಯೂ–1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಎ ಎಸ್ ಸಿ ವಕೀಲರಿಂದಃ

1. ಅಂಕಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–1 ಎಂದು ಗುರ್ತಿಸಲಾಯಿತು.
2. ಎರಡು ಗುರುತಿನ ಚೀಟಿಗಳನ್ನು ಹಾಜರುಪಡಿಸಿದ್ದು ನಿಪಿ–2 ಮತ್ತು 3 ಎಂದು ಗುರ್ತಿಸಲಾಯಿತು.

3. ಎರಡು ಆಧಾರ್ ಕಾರ್ಡ್ ಗಳನ್ನು ಹಾಜರುಪಡಿಸಿದ್ದು ನಿಪಿ-4 ಮತ್ತು 5 ಎಂದು ಗುರ್ತಿಸಲಾಯಿತು.

4. ಪಾನ್ ಕಾರ್ಡ್ ನ್ನು ಹಾಜರುಪಡಿಸಿದ್ದು ನಿಪಿ-6 ಎಂದು ಗುರ್ತಿಸಲಾಯಿತು.

5. ಯಶಸ್ವಿನಿ ಯೋಜನೆಯ ಕಾರ್ಡ ನ್ನು ಹಾಜರುಪಡಿಸಿದ್ದು ನಿಪಿ-7 ಎಂದು ಗುರ್ತಿಸಲಾಯಿತು.

6. ಗುರುತಿನ ಕಾರ್ಡ ನ್ನು ಹಾಜರುಪಡಿಸಿದ್ದು ನಿಪಿ-8 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಎ ಜಿ ಪಿ ರವರಿಂದಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಗೆ ಇಬ್ಬರು ಮಕ್ಕಳು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ತಾಯಿಯ ಸಹಿ ಇದೆ ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿರುವ ಶಾಲಾ ವರ್ಗಾವಣೆ ಪತ್ರವನ್ನು ನಿಡಿ-1 ಎಂದು ಗುರ್ತಿಸಲಾಯಿತಿ. ನಿಡಿ-1 ರಲ್ಲಿ ತನ್ನ ತಂದೆಯ ಹೆಸರು ಏನೆಂದು ನಮೂದಾಗಿದೆ ಎಂದರೆ ಬಸವರಾಜು. ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ನನ್ನ ಶಾಲೆಯ ನೊಂದಣಿ ಪುಸ್ತಕದ ಪ್ರತಿ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿಡಿ-2 ಎಂದು ಗುರ್ತಿಸಲಾಯಿತು. ನಿಡಿ-2 ರಲ್ಲಿ ತನ್ನ ತಂದೆಯ ಹೆಸರು ಏನೆಂದು ನಮೂದಾಗಿದೆ ಎಂದರೆ ಬಸವರಾಜು.

2. 1ನೇ ತರಗತಿಗೆ ನನ್ನನ್ನು ಯಾರು ಶಾಲೆಗೆ ಸೇರಿಸಿರುತ್ತಾರೆ ಎಂದರೆ ನನ್ನ ಅಜ್ಜಿ

1ನೇ ತರಗತಿಗೆ ನನ್ನ ತಾಯಿ ಸೇರಿಸಿರುತ್ತಾರೆ ಮತ್ತು ಎಲ್ಲಾ ಮಾಹಿತಿಗಳನ್ನು ನನ್ನ ತಾಯಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2002 ರಲ್ಲಿ 1ನೇ ತರಗತಿಗೆ ಸೇರಿಕೊಂಡಿರುತ್ತೇನೆ ಎಂದರೆ ನೆನಪಿರುವುದಿಲ್ಲ. ನಿಡಿ-2 ರ ಪ್ರಕಾರ ನಾನು 2002 ನೇ ಇಸವಿಯಲ್ಲಿ ಶಾಲೆಗೆ ದಾಖಲಾಗಿರುತ್ತೇನೆ ಎಂದರೆ ಸರಿ. ನನ್ನ ತಂದೆಯ ಗುರುತಿನ ಚೀಟಿ 2014 ರಲ್ಲಿ ಮಾಡಿಸಲಾಗಿರುತ್ತದೆ ಎಂದರೆ ಸರಿ. ಪ್ಯಾನ್ ಕಾರ್ಡ ಯಾವ ದಿನಾಂಕ ನೀಡಲಾಗಿರುತ್ತದೆ ಎಂದರೆ 2022 ಇಸವಿ. ಯಶಸ್ವಿನಿ ಕಾರ್ಡಿನಲ್ಲಿ ನನ್ನ ತಾಯಿ ಹೆಸರು ಏನೆಂದು ನಮೂದಾಗಿದೆ ಎಂದರೆ ಪುಷ್ಪ. ಯಶಸ್ವಿನಿ ಕಾರ್ಡಿನಲ್ಲಿ ನನ್ನ ಹೆಸರಿನ ಮುಂಭಾಗದಲ್ಲಿರುವ ಜೆ ಡಿ ಎಂದರೇನು ಎಂದರೆ ಗೊತ್ತಿಲ್ಲ.

3. ನನ್ನ ಅಣ್ಣನ ಹೆಸರು ಶಾಂತರಾಜು. ನನ್ನ ತಾಯಿ ಮತ್ತು ಅಣ್ಣನ ಹೆಸರಿನಲ್ಲಿರುವ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಅಣ್ಣನ ದಾಖಲಾತಿಗಳಲ್ಲಿಯೂ ಸಹ ನನ್ನ ತಂದೆ ಹೆಸರು ಬಸವರಾಜು ಮತ್ತು ತಾಯಿ ಹೆಸರು ಪುಷ್ಪ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ಪುಷ್ಪಾವತಿ ಮತ್ತು ನನ್ನ ತಾಯಿಯ ಹೆಸರು ಧರಣೇಂದ್ರ ಹೆಚ್ ಪಿ ಎಂದು ನೋಟರಿ ಅಫಿಡೆವಿಟ್ ಮಾಡಿಸಿರುತ್ತೀರಾ ಎಂದರೆ ಇಲ್ಲ. ಸದರಿ ಹೆಸರುಗಳ ಬಗ್ಗೆ ನ್ಯೂಸ್ ಪೇಪರ್ ನಲ್ಲಿ ಜಾಹಿರಾತು ನೀಡಿರುತ್ತೀರಾ ಎಂದರೆ ಇಲ್ಲ .

4. ನಾನು ದಿನಾಂಕಃ 11-04-2011 ರಂದು 10 ನೇ ತರಗತಿ ಪಾಸಾಗಿರುತ್ತೇನೆ. 2011 ನೇ ಇಸವಿಯಲ್ಲಿ ಅಂಕಪಟ್ಟಿಯಲ್ಲಿ ತಂದೆ ತಾಯಿಯ ಹೆಸರನ್ನು ನೋಡಿದ್ದೀರಾ ಎಂದರೆ ಇಲ್ಲ. ನನ್ನ ತಂದೆತಾಯಿ ನೀಡಿರುವ

ಮಾಹಿತಿಯ ಆಧಾರದ ಮೇಲೆ ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ತಂದೆ ತಾಯಿಯ ಹೆಸರನ್ನು ತುಂಬಲಾಗಿರುತ್ತದೆ. ಶಾಲೆಯ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಇಷ್ಟು ತಡವಾಗಿ ಈ ದಾವೆಯನ್ನು ಹೂಡುವ ಬಗ್ಗೆ ಯಾವುದೇ ಕಾರಣಗಳನ್ನು ನೀಡಿರುವುದಿಲ್ಲ ಎಂದರೆ ಈ ಹಿಂದೆ ನನ್ನ ತಂದೆ ತಾಯಿಯ ಹೆಸರನ್ನು ಗಮನಿಸಿರುವುದಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .